(ಕಂದಾಯ ಇಲಾಖೆ)

# ಸಹಾಯಕಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:196/2012-13 ದಿನಾಂಕ:11.08.2016.

ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ
ಸಹಾಯಕ ಆಯುಕ್ತರು, ಹೊಸಪೇಟೆ.

* * * * *

ವಾದಿಗಳು: ಶ್ರೀ/ ಶ್ರೀಮತಿ

1] ಮಲ್ಲಪ್ಪ ತಂದೆ ದಿ॥ ಕರಿಯಪ್ಪ,
2] ದೊಡ್ಡ ಮಾರೆಪ್ಪ ತಂದೆ ದಿ॥ ಕರಿಯಪ್ಪ,
3] ರಂಗಪ್ಪ ತಂದೆ ದಿ॥ ಕರಿಯಪ್ಪ,
4] ಪೂಜಪ್ಪ ತಂದೆ ದಿ॥ ಕರಿಯಪ್ಪ,
5] ಸಣ್ಣ ಮಾರೆಪ್ಪ ತಂದೆ ದಿ॥ ಕರಿಯಪ್ಪ,
ವಾಸ: ಕಣವಿತಿಮ್ಮಲಾಪುರ ಗ್ರಾಮ,
ಕಂಪ್ಲಿ ಹೋಬಳಿ, ಹೊಸಪೇಟೆ ತಾಲೂಕು,
ಬಳ್ಳಾರಿ ಜಿಲ್ಲೆ.

ಪ್ರತಿವಾದಿಗಳು: ಶ್ರೀ/ ಶ್ರೀಮತಿ

1] ತಹಶೀಲ್ದಾರರು, ಹೊಸಪೇಟೆ.

ವ್ಯಾಜ್ಯದಜಮೀನು

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಕಂಪ್ಲಿ | ಕಣವಿತಿಮ್ಮಲಾಪುರ | 200/ಎ | 20 ಎಕರೆ 05 ಸೆಂಟ್ಸ್ |
| | | | 200/ಬಿ | 13 ಎಕರೆ 04 ಸೆಂಟ್ಸ್ |
| | | | 200/ಸಿ | 03 ಎಕರೆ 32 ಸೆಂಟ್ಸ್ |

ಪೀಠಿಕೆ:-

ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಕಣವಿತಿಮ್ಮಲಾಪುರ ಗ್ರಾಮದ ಸ.ನಂ.200/ಎ ವಿಸ್ತೀರ್ಣ:20 ಎಕರೆ 05 ಸೆಂಟ್ಸ್; ಸ.ನಂ.200/ಬಿ ವಿಸ್ತೀರ್ಣ:13 ಎಕರೆ 04 ಸೆಂಟ್ಸ್; ಸ.ನಂ.200/ಸಿ ವಿಸ್ತೀರ್ಣ:03 ಎಕರೆ 32 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರ ಕಾರ್ಯಾಲಯದ ಹಿಂಬರಹ ಸಂಖ್ಯೆ: ಸಂ/ಕಂ/ಪಹಣಿ/ತಿದ್ದುಪಡಿ/172/2012-13 ದಿನಾಂಕ:23.08.2012 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:10.10.2012 ರಂದು ಸಲ್ಲಿಸಿರುತ್ತಾರೆ.

ವಾದಿಗಳು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:05.03.2013 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಗಳ ಪ್ರಕಾರ, ಸದರಿ ವ್ಯಾಜ್ಯದ ಜಮೀನುಗಳನ್ನು ಮೂಲತ: ಕರಿಯಪ್ಪ ಇವರಿಗೆ ಸೇರಿದ್ದು ಇವರು ತಮ್ಮ ಜೀವಿತಾವಧಿಯಲ್ಲಿ ಸಾಗು ಮಾಡುತ್ತಾ ಬಂದಿದ್ದು, ಅವರ ಮರಣಾನಂತರ ಅವರ ಮಕ್ಕಳಾದ ವಾಧಿಗಳು ಸಾಗುಮಾಡುತ್ತಾ ಬಂದಿರುವುದಾಗಿ, ವಾದಿ-1 ರವರ ಹೆಸರು ಪಹಣಿ ಕಾಲಂ 12(2) ರಲ್ಲಿ ನಮೂದು ಇರುವುದಾಗಿ, ಹಾಗೂ ಸದರಿಯವರ ಪ್ರಕಾರ ಸುಮಾರು 60-70 ವರ್ಷಗಳಿಂದ ವಾದಿಗಳ ತಂದೆ ಹಾಗೂ ವಾದಿಗಳು ಸದರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಾ ತಮ್ಮ ಜೀವನವನ್ನು ನಡೆಸುತ್ತಿದ್ದು, ಒಟ್ಟು ಕುಟುಂಬದ ಎಲ್ಲಾ ಸದಸ್ಯರು ಸದರಿ ಭೂಮಿಯ ಆದಾಯದಿಂದಲೇ ಬದುಕು ನಡೆಸುತ್ತಿರುವುದಾಗಿ, ವಾದಿಗಳ ಹೆಸರು ಪಹಣಿಯಲ್ಲಿ ನಮೂದು ಇರುವುದನ್ನು ತೋರಿಸಲು 1967-68 ರಿಂದ 2000 ರವರೆಗಿನ ಪಹಣಿ ಪತ್ರಿಕೆಗಳನ್ನು ಲಗತ್ತಿಸಿರುವುದಾಗಿ,

2000-01 ನೇ ಸಾಲಿನಲ್ಲಿ ಗಣಕೀಕೃತ ಪಹಣಿಗಳನ್ನು ಪರಿಚಯಿಸಿದಾಗ ವಾದಿಯ ಹೆಸರು ಬಿಟ್ಟು ಹೋಗಿರುವುದಾಗಿ, ಸದರಿ ತಪ್ಪನ್ನು ತಿದ್ದುಪಡಿ ಮಾಡಲು ಮಾನ್ಯ ತಹಶೀಲ್ದಾರರು, ಹೊಸಪೇಟೆ ಇವರಿಗೆ ದಿನಾಂಕ:09.07.2012 ರಂದು ಅರ್ಜಿ ಸಲ್ಲಿಸಲಾಗಿ ಸದರಿ ಅರ್ಜಿಗೆ ಪ್ರತಿವಾದಿ-1 ರವರು ದಿನಾಂಕ:10.09.2012 ರಂದು ಹಿಂಬರಹ ನೀಡಿದ್ದು, ಸದರಿ ಹಿಂಬರಹದಿಂದ ಬಾದಿತಗೊಂಡ ವಾದಿಯು ಸದರಿ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

**ಸದರಿ ಮೇಲ್ಮನವಿಗೆ ಕಾರಣವಾದ ಅಂಶಗಳನ್ನು ಈ ಕೆಳಗಿನಂತೆ ತಿಳಿಸಿರುತ್ತಾರೆ.**

1. ತಹಶೀಲ್ದಾರರು, ಹೊಸಪೇಟೆ ಇವರು ನೀಡಿರುವ ಹಿಂಬರಹವು ಕಾನೂನಿಗೆ ವಿರುದ್ದವಾಗಿದ್ದು, ಅದನ್ನು ತಳ್ಳಿ ಹಾಕಲು ಯೋಗ್ಯವಾಗಿರುವುದಾಗಿ ತಿಳಿಸಿರುತ್ತಾರೆ.
2. 1925 ರ ಡಯಾಗ್ಲಾಟ್ ಪ್ರತಿಯಲ್ಲಿ ಮೇಲ್ಮನವಿದಾರರ ತಂದೆಯಾದ ಮಾದಿಗ ಕರಿಯ @ ಕರಿಯಪ್ಪನ ಹೆಸರು ನಮೂದು ಇದ್ದು, ಡಿ.ಆರ್.ಸಂಖ್ಯೆ:57/41 ರಲ್ಲಿ ಪಟ್ಟಾ ನೀಡಿದಂತೆ ನಮೂದು ಸಹ ಇರುತ್ತದೆ. ಸದರಿ ಪಟ್ಟಾ ಪ್ರತಿಗಾಗಿ ಅರ್ಜಿ ಸಲ್ಲಿಸಿದ್ದು, ಎದುರುದಾರರು ಅಂತಹ ಕಡತ ಲಭ್ಯವಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಮೇಲ್ಮನವಿದಾರರ ಹೆಸರು ನಮೂದು ಮಾಡಲು ಮನವಿಯನ್ನು ತಿರಸ್ಕರಿಸಿ ಹಿಂಬರಹ ನೀಡಿರುತ್ತಾರೆ. ಕಾರಣ ಹಿಂಬರಹವನ್ನು ರದ್ದು ಮಾಡಿ, ಮೇಲ್ಮನವಿದಾರರ ಹೆಸರು ನಮೂದು ಮಾಡಲು ಆದೇಶಿಸಲು ಪ್ರಾರ್ಥಿಸಿರುತ್ತಾರೆ.
3. ಮೇಲ್ಮನವಿದಾರರ ಸ್ವಾಧೀನವನ್ನು ಗಮನಿಸಿ ಎದುರುದಾರರು ಮೇಲ್ಮನವಿದಾರರ ಹೆಸರನ್ನು ದಾಖಲಿಸಲು ಆದೇಶಿಸಬಹುದಿತ್ತು. ಬದಲಾಗಿ ಹಿಂಬರಹವನ್ನು ನೀಡಿರುತ್ತಾರೆ. ತಹಶೀಲ್ದಾರರು ನೀಡಿರುವ ಹಿಂಬರಹ ಕಾನೂನು ಬಾಹಿರವಾಗಿರುತ್ತದೆ. ಕಾರಣ ತಳ್ಳಿ ಹಾಕಿ ಮೇಲ್ಮನವಿದಾರರ ಹೆಸರನ್ನು ದಾಖಲಿಸಲು ಹೆಸರನ್ನು ದಾಖಲು ಮಾಡಲು ಮನವಿ.
4. ಈ ಮೇಲ್ಮನವಿಯು ಹಿಂಬರಹ ನೀಡಿದ ದಿನದಿಂದ ಅಂದರೆ, ದಿ:10.09.2012 ರಿಂದ 30 ದಿನಗಲ ಕಾಲಮಿತಿಯಲ್ಲಿ ಇದೆ.
5. ನಿಗಧಿತ ಕೋರ್ಟ ಫೀಯು ವಿನಾಯಿತಿ ಇರುವುದರಿಂದ ಕೋರ್ಟ ಫೀಯನ್ನು ತುಂಬಿಲ್ಲ.
6. ಮೇಲ್ಕಾಣಿಸಿದ ಎಲ್ಲಾ ಕಾರಣಗಳಿಂದ ಮಾನ್ಯ ನ್ಯಾಯಾಲಯವು ಎದುರುದಾರರು ನೀಡಿರುವ ಹಿಂಬರಹ ದಿನಾಂಕ:10.09.2012 ವನ್ನು ತಳ್ಳಿ ಹಾಕಿ, ಮೇಲ್ಮನವಿದಾರರ 1 ರಿಂದ 5 ರವರೆಗೆ ಹೆಸರನ್ನು ನಮೂದು ಮಾಡಲು ಪ್ರಾರ್ಥನೆ.

ಸದರಿ ಮೇಲ್ಕಂಡ ಅಂಶಗಳನ್ನು ತಮ್ಮ ಅಪೀಲಿಗೆ ಕಾರಣವಾಗಿ ತಿಳಿಸಿದ್ದು ಸದರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

**ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.**

1. ಸದರಿ ಜಮೀನಿನ ಡಯಾಗ್ಲಾಟ್ ಪ್ರತಿಯನ್ನು ಸಲ್ಲಿಸಿದ್ದು, ಡಯಾಗ್ಲಾಟನ್ನು ಪರಿಶೀಲಿಸಲಾಗಿ, ಸ.ನಂ.200/ಎ ವಿಸ್ತೀರ್ಣ:20 ಎಕರೆ 05 ಸೆಂಟ್ಸ್; ಸ.ನಂ.200/ಬಿ ವಿಸ್ತೀರ್ಣ:13 ಎಕರೆ 04 ಸೆಂಟ್ಸ್; ಸ.ನಂ.200/ಸಿ ವಿಸ್ತೀರ್ಣ:03 ಎಕರೆ 32 ಸೆಂಟ್ಸ್; ಜಮೀನು ಇದ್ದು, ಸದರಿ ಜಮೀನಿನಲ್ಲಿ ಮಾದಿಗ ಕರಿಗ ತುಂಗಭದ್ರ ಪ್ರಾಜೆಕ್ಟ್ ಷರ್ತುಲಕು ಮಂಜೂರು ಎಂದು ನಮೂದು ಇರುವುದು ಕಂಡುಬಂದಿರುತ್ತದೆ.
2. ತಹಶೀಲ್ದಾರರ ಕಾರ್ಯಾಲಯ, ಹೊಸಪೇಟೆ ಇವರ ಕಾರ್ಯಾಲಯದ ಹಿಂಬರಹ ಸಂಖ್ಯೆ: ಸಂ/ದಾಖಲೆ/01/2012-13 ದಿನಾಂಕ:14.06.2012 ರ ಮೂಲಕ ಕೆ.ತಿಮ್ಮಲಾಪುರ ಗ್ರಾಮದ ಸ.ನಂ.200 ಜಮೀನಿನಲ್ಲಿ ನೀಡಿದ ಡಿ.ಅರ್.ನಂ.57/41ರ ಸಾಗುವಳಿ ಚೀಟಿಯ ನಕಲು ನೀಡಲು ಕೋರಿದನ್ವಯ ಅಭಿಲೇಖಾಲಯದಲ್ಲಿರುವ ಕಣವಿತಿಮ್ಮಲಾಪುರ ಗ್ರಾಮದ ಡಿ.ಆರ್. ಕಡತಗಳನ್ನು ಪರಿಶೀಲಿಸಲಾಗಿ, ನೀವು ಕೋರಿದ ಡಿ.ಆರ್.57/41 ಕಡತವು ಅಭಿಲೇಖಾಲಯದಲ್ಲಿ ಲಭ್ಯವಿರುವುದಿಲ್ಲವೆಂದು ಈ ಮೂಲಕ ಹಿಂಬರಹ ನೀಡಿದೆ ಎಂದು ಹಿಂಬರಹ ನೀಡಿರುವುದು ಕಂಡುಬಂದಿರುತ್ತದೆ.
3. ಸದರಿ ಜಮೀನಿನ 1968-69 ರಿಂದ 1999-2000 ನೇ ಸಾಲಿನವರೆಗಿನ ಪಹಣಿ ಪ್ರತಿಗಳನ್ನು ಪರಿಶೀಲಿಸಲಾಗಿ, ಸ.ನಂ.200 ವಿಸ್ತೀರ್ಣ:36 ಎಕರೆ 41 ಸೆಂಟ್ಸ್ ಇದ್ದು, ಸದರಿ ಜಮೀನಿನ ಪಹಣಿ ಕಾಲಂ9 ರಲ್ಲಿ ಸ್ವಾಧೀನದಾರರ ಹೆಸರು ನಮೂದು ಇರುವುದಿಲ್ಲ, ಹಾಗೂ ಪಹಣಿ ಕಾಲಂ 12(2) ರಲ್ಲಿ

ಹರಿಜನ ಮಲ್ಲಪ್ಪ ಎಂದು ಸಾಗುವಳಿದಾರರ ಹೆಸರು ಹಾಗೂ ಖಾತೆ ನಂ:222 ಎಂದು ನಮೂದು ಇರುತ್ತದೆ.

4. ಸದರಿ ಪ್ರಶ್ನಿತ ಹಿಂಬರಹ ವನ್ನು ಲಗತ್ತಿಸಿದ್ದು, ತಹಶೀಲ್ದಾರರು, ಹೊಸಪೇಟೆ ಇವರು ತಮ್ಮ ಕಾರ್ಯಾಲಯದ ಹಿಂಬರಹ ಸಂಖ್ಯೆ: ಸಂ/ಕಂ/ಪಹಣಿ/ತಿದ್ದುಪಡಿ/172/2012-13 ದಿನಾಂಕ:23.08.2012 ರ ಮೂಲಕ ಸ.ನಂ.200/ಎ, ಸ.ನಂ.200/ಬಿ, ಸ.ನಂ.200/ಸಿ ಜಮೀನುಗಳ ಒಟ್ಟು ವಿಸ್ತೀರ್ಣ:36 ಎಕರೆ 41 ಸೆಂಟ್ಸ್ ಜಮೀನು ಇದ್ದು, ಈ ಜಮೀನುಗಳನ್ನು ಹಿಂದಿನಿಂದಲೂ ಸಾಗುವಳಿ ಮಾಡುತ್ತಾ ಬಂದಿದ್ದು, ಅವರ ಹೆಸರುಗಳು ಸಾಗುವಳಿ ಕಾಲಂ ನಲ್ಲಿ ಮಾತ್ರ ನಮೂದಾಗಿದ್ದು, ಮತ್ತು ಪಹಣಿ ಕಾಲಂ 9 ರಲ್ಲಿ ಯಾವುದೇ ನಮೂದು ಇರುವುದಿಲ್ಲ ಹಾಗೂ ಇತ್ತೀಚಿನ ಗಣಕೀಕರಣ ಪಹಣಿಗಳಲ್ಲಿ ಪಹಣಿ ಕಾಲಂ 9 ರಲ್ಲಿ ಯಾವುದೇ ನಮೂದು ಇಲ್ಲದ್ದುದರಿಂದ ಸಾಗುವಳಿ ಕಾಲಂ ನಲ್ಲಿ ಯಾವುದೇ ಹೆಸರುಗಳು ನಮೂದಾಗಿರುವುದಿಲ್ಲ ಈಗ ನಮೂದಿಸಲು ಸಾಧ್ಯವಿರುವುದಿಲ್ಲ ಎಂದು ಈ ಮೂಲಕ ತಮಗೆ ತಿಳಿಯಪಡಿಸಿದೆ. ಎಂದು ಹಿಂಬರಹ ನೀಡಿರುವುದು ಕಂಡು ಬಂದಿರುತ್ತದೆ.
5. ಸದರಿ ಸ.ನಂ.200 ವಿಸ್ತೀರ್ಣ:36 ಎಕರೆ 41 ಸೆಂಟ್ಸ್ ಜಮೀನಿನ ರಿವಿಜನ್ ಸೆಟ್ಲಮೆಂಟ್ ರಿಜಿಸ್ಟರ್ ಸಲ್ಲಿಸಿದ್ದು ಇದರಲ್ಲಿ ಹಿಡುವಳಿದಾರರ ಹೆಸರು **ಮಾದಿಗ ಕರಿಯಪ್ಪ** ಎಂದು ನಮೂದು ಇರುತ್ತದೆ.
6. ಉಪನೋಂದಾಣಾಧೀಕಾರಿಗಳು, ಕಂಪ್ಲಿ ಇವರಿಂದ ವರದಿ ಪಡೆಯಲಾಗಿ, ಸದರಿ ವರದಿಯಲ್ಲಿ ಸದರಿ ಜಮೀನುಗಳ ಬಗ್ಗೆ ರಿಜಿಸ್ಟರ್ ಆಫ್ ಹೋಲ್ಡಿಂಗ್ ಪ್ರತಿಯನ್ನು ಸಲ್ಲಿಸಿದ್ದು, ಸದರಿ ಜಮೀನುಗಳು ಮಾದಿಗ ಕರಿಯ ಇವರಿಗೆ ಪಟ್ಟಾ ಮಂಜೂರಾದ ಬಗ್ಗೆ ನಮೂದು ಇರುತ್ತದೆ.
7. ಪರ್ಯಾವೇಕ್ಷಕರು, ಭೂಮಾಪನ ಶಾಖೆ, ತಹಶೀಲ್ದಾರರ ಕಛೇರಿ, ಹೊಸಪೇಟೆ ಇವರು ದಿನಾಂಕ:02.03.2016 ರಂದು ಸದರಿ ಜಮೀನಿಗೆ ಸಂಬಂಧಿಸಿದಂತೆ ಭೂಮಾಪನ ಶಾಖೆಯ ಅಭಿಲೇಖಾಲಯದಲ್ಲಿ ದಾಖಲೆ ಪರಿಶೀಲಿಸಲಾಗಿ ಸ.ನಂ.200 ವಿಸ್ತೀರ್ಣ:36 ಎಕರೆ 41 ಸೆಂಟ್ಸ್ ಆಕಾರ ಬಂದ್ ಪ್ರಕಾರ ಪೂರಾ ನಂಬರ್ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಸದರಿ ಜಮೀನು ಪಟ್ಟಾ ಜಮೀನು ಎಂದು ಕಂಡು ಬಂದಿರುತ್ತದೆ ಎಂದು ಮಾಹಿತಿ ನೀಡಿರುತ್ತಾರೆ.
8. ಸದರಿ ಜಮೀನಿನ ಬಗ್ಗೆ ತಹಶೀಲ್ದಾರರು, ಹೊಸಪೇಟೆ ಇವರಿಗೆ ಸ್ಥಾನಿಕ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದ್ದು, ತಹಶೀಲ್ದಾರರು, ಹೊಸಪೇಟೆ ಇವರು ದಿನಾಂಕ:01.03.2016 ರಂದು ವರದಿ ನೀಡಿದ್ದು, ಸದರಿ ವರದಿಯಲ್ಲಿಯ ಅಂಶಗಳು ಹೀಗಿವೆ: ಸದರಿ ವರದಿಯಲ್ಲಿ ಕಂದಾಯ ನಿರೀಕ್ಷಕರು, ಕಂಪ್ಲಿ, ಗ್ರಾ.ಲೆ. ಕಣವಿತಿಮ್ಮಲಾಪುರ, ಭೂ ಮಾಪಕರು, ಹಾಗೂ ಅರ್ಜಿದಾರರಾದ ಭರಮಪ್ಪ ತಂದೆ ಸತ್ಯಪ್ಪ, ಮಾರಪ್ಪ ತಂದೆ ಸತ್ಯಪ್ಪ ಹಂಪಾದೇವನಹಳ್ಳಿ ಗ್ರಾಮ, ಇವರೊಂದಿಗೆ ಸದ್ರಿ ಸ.ನಂ. ಜಮೀನನ್ನು ಸಾಗುವಳಿ ಮಾಡುತ್ತಿರುವ ಬಗ್ಗೆ ಸಾರ್ವಜನಿಕರ ಸಮಕ್ಷಮದಲ್ಲಿ ಹೋಗಿ ಕಣವಿತಿಮ್ಮಲಾಪುರ ಸ.ನಂ.200 ರ ಮೋಕಾದ ಮೇಲೆ ಹೋಗಿ ಸ್ಥಳ ಪರಿಶೀಲನೆ ಮಾಡಲಾಗಿ ಈಗ ಪ್ರಸ್ತುತ ಯಾರು ಸಾಗುವಳಿ ಮಾಡುತ್ತಿರುವುದಿಲ್ಲ ಆದರೆ ಕಳೆದ ಐದು ವರ್ಷಗಳ ಹಿಂದೆ ಸಾಗುವಳಿ ಮಾಡಿ ಬಿಳಿ ಜೋಳ ಬಿತ್ತಿದ್ದರೆಂದು ಸ್ಥಾನಿಕ ವಿಚಾರಣೆಯಿಂದ ತಿಳಿದು ಬಂದಿತು.

ಕಣವಿತಿಮ್ಮಲಾಪುರ ಗ್ರಾಮದ ಸ.ನಂ.200 ಇದು ಡಯಾಗ್ಲಾಟ್ ಪ್ರಕಾರ ಮಾದಿಗರ ಕರಿಯಪ್ಪ ಎಂದು ಇರುತ್ತದೆ. ಪೈಸಲ್ ಪತ್ರಿಕೆಯಲ್ಲಿ ಕೂಡಾ ಮಾದಿಗರ ಕರಿಯಪ್ಪ ಎಂದು ನಮೂದಾಗಿರುತ್ತದೆ. ಆಕಾರ ಬಂದ ಪ್ರಕಾರ ಸ.ನಂ.200 ಕ್ಕೆ ಆಕಾರ(Assesment) ರೂ.10.93 ನಿಗಧಿಯಾಗಿರುತ್ತದೆ. ಈ ಎಲ್ಲಾ ಮೇಲ್ಕಾಣಿಸಿದ ಅಂಶಗಳ ಹಿನ್ನೆಲೆಯಲ್ಲಿ ಪಟ್ಟಾ ಜಮೀನಾಗಿರುವುದು ಕಂಡು ಬಂದಿರುತ್ತದೆ. ಸದ್ರಿ ಸ.ನಂ. ನಲ್ಲಿ ಯಾವುದೇ ಅನಧಿಕೃತ ಸಾಗುವಳಿ ಮಾಡಿರುವುದು ಕಂಡು ಬಂದಿರುವುದಿಲ್ಲ ಪ್ರಸ್ತುತ ಜಮೀನು ಪಢಾ ಇರುತ್ತದೆ.

ಮುಂದುವರೆದು ಮೈಸೂರು ರಿವಿಜನ್ ಸೆಟ್ಲಮೆಂಟ್ ಪೈಸಲ್ ಪತ್ರಿಕೆಯಲ್ಲಿ ಶ್ರೀ ಮಾದಿಗ ಕರಿಯಪ್ಪ ಎಂದು ನಮೂದಿಸಿದ್ದು, ಮಾದಿಗ ಕರಿಯಪ್ಪನ ವಾರಸುದಾರರ ಬಗ್ಗೆ ವಿಚಾರಣೆ ಮಾಡಲಾಗಿ ಇವರಿಗೆ ಈ ಕೆಳಕಂಡಂತೆ ವಾರಸುದಾರರಿರುವುದು ತಿಳಿದು ಬಂದಿರುತ್ತದೆ. ಮಾದಿಗರ ಕರಿಯಪ್ಪ ಮೃತ ಪಟ್ಟಿದ್ದು ಮೃತರಿಗೆ ಮಕ್ಕಳಿರುವುದಿಲ್ಲ ಮೃತರ ಹೆಂಡತಿ ತಿಪ್ಪಮ್ಮ ಕೂಡ ಮೃತ ಪಟ್ಟಿರುವುದು ತಿಳಿದು ಬಂದಿರುತ್ತದೆ.

ಮುಂದುವರೆದು, ಮೇಲ್ಕಾಣಿಸಿದಂತೆ ಮಾದಿಗರ ಕರಿಯಪ್ಪ ಈತನ ಹೆಸರು ಕಣವಿ ತಿಮ್ಮಲಾಪುರ ಸ.ನಂ.200 ರ ಮುಮದೆ ನಮುದಾಗಿದ್ದು, ಆದರೆ ಈತನಿಗೆ ಮಕ್ಕಳಿರದ ಕಾರಣ ಈತನ ಅಣ್ಣ ಮಾರೆಪ್ಪ ಮತ್ತು ತಮ್ಮನಾದ ಸತ್ಯಪ್ಪ ಇವರ ವಾರಸುದಾರರ ವಿವರ ಈ ಕೆಳಗಿನಂತೆ ಇರುತ್ತದೆ.

ಮಾದಿಗರ ಕರಿಯಪ್ಪನ ತಂದೆ ಪಾಮಪ್ಪ ಈತನಿಗೆ ಒಟ್ಟು ಮೂರು ಜನ ಮಕ್ಕಳು ಅಂದರೆ 1ನೇ ಮಗ ಮಾರೆಪ್ಪ 2ನೇ ಮಗ ಕರಿಯಪ್ಪ 3ನೇ ಮಗ ಸತ್ಯಪ್ಪ, 1ನೇ ಮಗ ಮಾರೆಪ್ಪ ಮೃತ ಪಟ್ಟಿದ್ದು ಮೃತರ ಹೆಂಡತಿ ಶ್ರೀಮತಿ ಈರಮ್ಮ ಈಕೆಯು ಮೃತ ಪಟ್ಟಿರುತ್ತಾರೆ. ಇವರಿಗೆ ಒಬ್ಬನೇ ಮಗ ಶ್ರೀ ಹೊಟ್ಟೆ ನಾಗಪ್ಪ(ಮೃತ) ಎಂಬಾತನು ಈತನಿಗೆ ವಿವಾಹ ಆಗಿದ್ದಿಲ್ಲವೆಂದು ಆದರೆ ಈತನು ಶ್ರೀಮತಿ ಈರಮ್ಮ ಎಂಬ ದೇವದಾಸಿ ಮಹಿಳೆ ಜೊತೆಗೆ ಸಂಬಂಧ ಹೊಂದಿದ್ದನೆಂದು ಆ ಸಂಬಂಧದಿಂದ ಮೂರು ಜನ ಮಕ್ಕಳಾಗಿದ್ದು, 1.ನಾರಾಯಣ, 2.ಹಂಪಮ್ಮ, 3.ಲಚುಮಪ್ಪ ಎಂಬುವವರು ಇರುತ್ತಾರೆ.

ಪಾಮಪ್ಪನ 2ನೇ ಮಗ ಮಾದಿಗರ ಕರಿಯಪ್ಪ ಈತನು ಮೃತ ಪಟ್ಟಿದ್ದು ಮೃತನ ಹೆಂಡತಿ ತಿಪ್ಪಮ್ಮ ಮೃತ ಪಟ್ಟಿದ್ದು ಇವರಿಗೆ ಯಾವುದೇ ಮಕ್ಕಳಾಗಿರುವುದಿಲ್ಲ ಎಂಬುದು ವಿಚಾರಣೆಯಿಂದ ತಿಳಿದು ಬಂದಿರುತ್ತದೆ.

ಪಾಮಪ್ಪನ 3ನೇ ಮಗ ಸತ್ಯಪ್ಪ ಈತನು ಮೃತ ಪಟ್ಟಿದ್ದು ಮೃತನ ಹೆಂಡತಿ ಶ್ರೀಮತಿ ಮಾರೆಮ್ಮ ಈಕೆಯು ಮೃತ ಪಟ್ಟಿದ್ದು ಮೃತರಿಗೆ ಮಕ್ಕಳು 1ನೇ ಮಗ ಮಾರೆಪ್ಪ (ಜೀವಂತ) 2ನೇ ಮಗ ರಂಗಪ್ಪ(ಜೀವಂತ) 3ನೇ ಮಗಳು ಮಾರೆಮ್ಮ ಮೃತಳಾಗಿದ್ದು, ಮೃತಳಿಗೆ ಮಕ್ಕಳು ಈಶ್ವರಮ್ಮ ಯರಿಯಮ್ಮ ಮತ್ತು ಮಾರೇಶ ಎಂಬುವರು ಜೀವಂತ ವಾರಸುದಾರರಿರುತ್ತಾರೆ.

4ನೇ ಮಗ ಪಾಮಪ್ಪ (ಜೀವಂತ) 5ನೇ ಮಗ ಸಣ್ಣ ಮಾರೆಪ್ಪ (ಜೀವಂತ) 6ನೇ ಮಗಳು ಹುಲಿಗೆಮ್ಮ (ಜೀವಂತ) ಇವರಲ್ಲದೆ ಶ್ರೀ ಸತ್ಯಪ್ಪ (ಮೃತ) ಮೇಲ್ಕಾಣಿಸಿದ ಹೆಂಡತಿ ಶ್ರೀಮತಿ ಮಾರೆಮ್ಮ (ಮೃತ) ಈಕೆಯನ್ನು ವಿವಾಹ ಆಗುವದಕ್ಕಿಂತ ಮುಂಚೆ ಶ್ರೀಮತಿ ಕರಿಹುಲಿಗೆಮ್ಮ ದೇವದಾಸಿ (ಮೃತ) ಎಂಬುವವರ ಜೊತೆಗೆ ಸಂಬಂಧ ಹೊಂದಿದ್ದನೆಂಬುವುದು ಆ ಸಂಬಂಧದಿಂದ ಶ್ರೀಮತಿ ಕರಿಹುಲಿಗೆಮ್ಮ ದೇವದಾಸಿ (ಮೃತ) ಈಕೆಯ ಮಕ್ಕಳಾದ 1ನೇ ಹುಚ್ಚಪ್ಪ ಎಂಬುವವರು ಈತನು ಮೃತ ಪಟ್ಟಿದ್ದು, ಮೃತರಿಗೆ ಪಕ್ಕೀರಮ್ಮ ಎಂಬ ಹೆಂಡತಿ ಜೀವಂತವಿರುತ್ತಾರೆ. 2ನೇ ಮಗ ಶ್ರೀ ಸಣ್ಣ ಮಲ್ಲಪ್ಪ ಎಂಬುವರಿದ್ದು ಈತನು ಜೀವಂತ ಇರುತ್ತಾನೆ.

ಒಟ್ಟಾರೆಯಾಗಿ ಸದ್ರಿ ಕಣವಿ ತಿಮ್ಮಲಾಪುರ ಗ್ರಾಮದ ಸ.ನಂ.200 ಪೈಸಲ್ ಪತ್ರಿಕೆ ಪ್ರಕಾರ ಆಕಾರ ನಿಗಧಿಯಾಗಿದ್ದು, ಪಟ್ಟಾ ಜಮೀನಾಗಿರುವುದು ಕಂಡು ಬಂದಿರುತ್ತದೆ ಆದರೆ ಅಪೀಲುದಾರರಿಗೆ ಮೇಲ್ಕಾಣಿಸಿದ ದಿವಂಗತ ಶ್ರೀ ಮಾದಿಗ ಕರಿಯಪ್ಪ ಈತನಿಗೆ ವಾರಸುದಾರರೆಂಬ ಕುರಿತು ಮೇಲ್ಕಾಣಿಸಿದ ಎಲ್ಲಾ ವಾರಸುದಾರರಿಗೆ ವಿಚಾರಣೆಗೆ ಅವಕಾಶ ಕೊಟ್ಟು ಮುಂದಿನ ಕ್ರಮ ಜರುಗಿಸಬಹುದೆಂದು ತಮ್ಮಲ್ಲಿ ಇದ್ದ ವಿಷಯವನ್ನು ಸಲ್ಲಿಸಲಾಗಿದೆ ಎಂದು ತಹಶೀಲ್ದಾರರು, ಹೊಸಪೇಟೆ ಇವರು ವರದಿ ನೀಡಿರುತ್ತಾರೆ.

**ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತವೆ.**

1. ಸದರಿ ಜಮೀನುಗಳ ಬಗ್ಗೆ ಗ್ರಾಮಲೆಕ್ಕಾಧಿಕಾರಿಯವರು ನೀಡಿರುವ ಡಯಾಗ್ಲಾಟ್ ಪ್ರತಿಯನ್ನು ಪರಿಶೀಲಿಸಲಾಗಿ ಕಾಲಂ 11 ರಲ್ಲಿ "......." [ಸರ್ಕಾರ] ಎಂದು ನಮೂದು ಇರುವುದು ಕಂಡುಬಂದಿರುತ್ತದೆ.
2. ಸಹಾಯಕ ಭೂ ದಾಖಲೆಗಳ ನಿರ್ದೇಶಕರು, ಹೊಸಪೇಟೆ ಇವರು ನೀಡಿರುವ ಡಯಾಗ್ಲಾಟ್ ಪುಸ್ತಕದಲ್ಲಿ ಸದರಿ ಜಮೀನಿನಲ್ಲಿ ಮಾದಿಗ ಕರಿಗ ತುಂಗಭದ್ರ ಪ್ರಾಜೆಕ್ಟ್ ಷರ್ತುಲಕು ಮಂಜೂರು ಎಂದು ಹಾಗೂ ಡಿ.ಆರ್.ನಂ.57/41 ಎಂದು ಕೈ ಬರಹದಲ್ಲಿ ನಮೂದು ಇರುವುದು ಕಂಡುಬಂದಿರುತ್ತದೆ.
3. ಸಹಾಯಕ ಭೂ ದಾಖಲೆಗಳ ನಿರ್ದೇಶಕರು, ಹೊಸಪೇಟೆ ಹಾಗೂ ತಹಶೀಲ್ದಾರರು ಹೊಸಪೇಟೆ ಇವರಲ್ಲಿ ಸದರಿ ಡಿ.ಆರ್.ನಂ.57/41 ಪಟ್ಟಾ ಪ್ರತಿಯನ್ನು ನೀಡಲು ಸೂಚಿಸಿದ್ದು, ಸದರಿಯವರುಗಳು ಈ ಬಗ್ಗೆ ಯಾವುದೇ ದಾಖಲೆ ನೀಡಿರುವುದಿಲ್ಲ ಹಾಗೂ ಸದರಿ ಪಟ್ಟಾ ಪ್ರತಿಯು ಲಭ್ಯವಿಲ್ಲವೆಂದು ವಾದಿಗಳಿಗೆ ಹಿಂಬರಹ ನೀಡಿರುವುದು ಕಂಡು ಬಂದಿರುತ್ತದೆ.
4. ವಾದಿಗಳು ತಮ್ಮ ಹಕ್ಕನ್ನು ಸಾಬೀತುಪಡಿಸಲು ಸದರಿ ಡಿ.ಆರ್.ನಂ.57/41 ಪ್ರತಿಯನ್ನು ಸಲ್ಲಿಸಿರುವುದಿಲ್ಲ ಹಾಗೂ ತಮ್ಮ ಬಳಿ ಸದರಿ ಪಟ್ಟಾ ನೀಡಿರುವ ಬಗ್ಗೆ ಯಾವುದೇ ದಾಖಲೆಗಳು ಸಲ್ಲಿಸಿರುವುದಿಲ್ಲ.

5. ಸದರಿ ಜಮೀನಿನ 1968-69 ರಿಂದ 1999-2000 ನೇ ಸಾಲಿನವರೆಗಿನ ಪಹಣಿ ಪ್ರತಿಗಳನ್ನು ಪರಿಶೀಲಿಸಲಾಗಿ, ಸ.ನಂ.200 ವಿಸ್ತೀರ್ಣ:36 ಎಕರೆ 41 ಸೆಂಟ್ಸ್ ಇದ್ದು, ಸದರಿ ಜಮೀನಿನ ಪಹಣಿ ಕಾಲಂ 3 ರಲ್ಲಿ ರೂ.10.93 ತರಂ ನಮೂದಾಗಿರುವುದು ಕಂಡುಬಂದಿರುತ್ತದೆ. ಕಾಲಂ9 ರಲ್ಲಿ ಸ್ವಾಧೀನದಾರರ ಹೆಸರು ನಮೂದು ಇರುವುದಿಲ್ಲ ಮತ್ತು ಕಾಲಂ 6 ರಲ್ಲಿ ಪಟ್ಟಾ ಅಥವಾ ಸರ್ಕಾರ ಅಥವಾ ಇನಾಂ ಅಥವಾ ಇತರೆ ಜಮೀನಾಗಿದೆಯೇ? ಎಂಬುದರ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಹಾಗೂ ಪಹಣಿ ಕಾಲಂ 12(2) ರಲ್ಲಿ ಮಾದಿಗ ಕರಿಯಪ್ಪ, ಹರಿಜನ ಮಲ್ಲಪ್ಪ ಎಂದು ಸಾಗುವಳಿದಾರರ ಹೆಸರು ಹಾಗೂ ಖಾತೆ ನಂ:222 ಎಂದು ನಮೂದು ಇರುತ್ತದೆ.
6. ಸದರಿ ಸ.ನಂ. ಗಳ ಗಣಕೀಕೃತ ಪಹಣಿಗಳನ್ನು ತೆಗೆಯಲು ಪರೀಕ್ಷಿಸಲಾಗಿ, ಭೂಮಿ ತಂತ್ರಾಂಶದಲ್ಲಿ "No records exist for the specified survey number. Please enter a valid survey number" ಎಂದು ತೋರಿಸುತ್ತಿರುವುದು ಕಂಡು ಬಂದಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಕಣವಿತಿಮ್ಮಲಾಪುರ ಗ್ರಾಮದ ಸ.ನಂ.200/ಎ ವಿಸ್ತೀರ್ಣ:20 ಎಕರೆ 05 ಸೆಂಟ್ಸ್; ಸ.ನಂ.200/ಬಿ ವಿಸ್ತೀರ್ಣ:13 ಎಕರೆ 04 ಸೆಂಟ್ಸ್; ಸ.ನಂ.200/ಸಿ ವಿಸ್ತೀರ್ಣ:03 ಎಕರೆ 32 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರ ಕಾರ್ಯಾಲಯದ ಹಿಂಬರಹ ಸಂಖ್ಯೆ: ಸಂ/ಕಂ/ಪಹಣಿ/ತಿದ್ದುಪಡಿ/172/2012-13 ದಿನಾಂಕ:23.08.2012 ವನ್ನು ಪ್ರಶ್ನಿಸಿ ಸಲ್ಲಿಸಿದ ಮೇಲ್ಮನವಿಯನ್ನು ವಜಾಗೊಳಿಸುತ್ತಾ, ಸದರಿ ವ್ಯಾಜ್ಯದ ಜಮೀನುಗಳಿಗೆ ಸಂಬಂಧಿಸಿದಂತೆ ಹೊಸದಾಗಿ ಗಣಕೀಕೃತ ಪಹಣಿಗಳನ್ನು ಸೃಷ್ಟಿಸಲು ಹಾಗೂ ಪಹಣಿಯ ಕಾಲಂ 9 ರಲ್ಲಿ **ಸರ್ಕಾರ** ಎಂದು ನಮೂದಿಸಲು ಈ ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ವಜಾಗೊಳಿಸುತ್ತಾ,** ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಕಣವಿತಿಮ್ಮಲಾಪುರ ಗ್ರಾಮದ ಸ.ನಂ.200/ಎ ವಿಸ್ತೀರ್ಣ:20 ಎಕರೆ 05 ಸೆಂಟ್ಸ್; ಸ.ನಂ.200/ಬಿ ವಿಸ್ತೀರ್ಣ:13 ಎಕರೆ 04 ಸೆಂಟ್ಸ್; ಸ.ನಂ.200/ಸಿ ವಿಸ್ತೀರ್ಣ:03 ಎಕರೆ 32 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಸದರಿ ವ್ಯಾಜ್ಯದ ಜಮೀನುಗಳಿಗೆ ಸಂಬಂಧಿಸಿದಂತೆ ಹೊಸದಾಗಿ ಗಣಕೀಕೃತ ಪಹಣಿಗಳನ್ನು ಸೃಷ್ಟಿಸಲು ಹಾಗೂ ಪಹಣಿಯ ಕಾಲಂ 9 ರಲ್ಲಿ **ಸರ್ಕಾರ** ಎಂದು ನಮೂದಿಸಲು ತಹಶೀಲ್ದಾರರು, ಹೊಸಪೇಟೆ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:11.08.2016 ರಂದುತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ

ಪ್ರತಿಯನ್ನು:-

1. ಕಾರ್ಯದರ್ಶಿಗಳು, ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಆಯೋಗ, ನಂ.14/3, 2ನೇ ಮಹಡಿ, ಸಿ.ಎಫ್.ಸಿ. ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-560001. ಇವರಿಗೆ ಮಾಹಿತಿಗಾಗಿ.
2. ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಮಾಹಿತಿಗಾಗಿ.
3. ತಹಶೀಲ್ದಾರರು, ಹೊಸಪೇಟೆ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.